‘ಮುಖವನ್ನು ಮುಚ್ಚಿಕೊಳ್ಳದೆ ರಸ್ತೆಯಲ್ಲಿ ನಡೆಯುವಾಗ ಜನ ವಿಚಿತ್ರವಾಗಿ ನೋಡುತ್ತಾರೆ. ನಿನ್ನ ಮುಖವೇಕೆ ಹೀಗಾಗಿದೆ ಎಂದು ಪ್ರಶ್ನೆಗಳನ್ನು ಮುಖಕ್ಕೆ ರಾಚುವಂತೆ ಒರಟಾಗಿ ಕೇಳುತ್ತಾರೆ’ ಎನ್ನುವಾಗ, ಸಂತ್ರಸ್ತರನ್ನು ನಾವು ಇನ್ನಷ್ಟು ಸಹಾನುಭೂತಿಯಿಂದ ನಡೆಸಿಕೊಳ್ಳಬೇಕಾದ ಅಗತ್ಯವನ್ನು ಅವರ ಮಾತು ಸೂಚಿಸುತ್ತದೆ. ರೇಷ್ಮಾ ಅವರಿಗೆ ಅಮೆರಿಕದಲ್ಲಿ ಆದ ಅನುಭವ ಬೇರೆ ರೀತಿಯದು. ರಸ್ತೆಗಳಲ್ಲಿ ಎದುರಾಗುವ ಅಲ್ಲಿನ ಜನ ಮುಗುಳ್ನಗೆಯನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರೇ ಹೊರತು ಪ್ರಶ್ನೆಗಳನ್ನಲ್ಲ. ‘ನಿನ್ನ ಮುಖಕ್ಕೇನಾಯಿತು ಎನ್ನುವ ಪ್ರಶ್ನೆಯನ್ನು ಅಮೆರಿಕನ್ನರೆಂದೂ ಕೇಳುವುದಿಲ್ಲ’ ಎನ್ನುವುದು ಅವರ ಅನುಭವದ ಮಾತು.

ಸಂತ್ರಸ್ತ ಹೆಣ್ಣುಮಕ್ಕಳು ಜೀವನವನ್ನು ಧೈರ್ಯದಿಂದ ಹಾಗೂ ಘನತೆಯಿಂದ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ರೇಷ್ಮಾ ಅವರು ಮಾತನಾಡಿರುವ ವಿಡಿಯೊಗಳು ಯೂಟ್ಯೂಬ್‌ನಲ್ಲಿವೆ. ದೌರ್ಜನ್ಯಕ್ಕೆ ಒಳಗಾದ ಹೆಣ್ಣುಮಕ್ಕಳಿಗೆ ಅವರು ಬ್ಯೂಟಿ ಟಿಪ್ಸ್‌ಗಳನ್ನೂ ನೀಡಿದ್ದಾರೆ. ‘ತುಟಿಗಳನ್ನು ಕೆಂಪು ಮಾಡಿಕೊಳ್ಳುವುದು ಹೇಗೆ?’ ಎನ್ನುವ ಅವರ ವಿಡಿಯೊ (bit.ly/3aGSVOj) ಜನಪ್ರಿಯವೂ ಮಾನವೀಯವೂ ಆದುದು.

ಹಾಗಾದರೆ, ಹೆಣ್ಣುಮಕ್ಕಳ ಮೇಲೆ ಆ್ಯಸಿಡ್ ದಾಳಿ ನಡೆಸುವವರಾದರೂ ಯಾರು? ಯಾರೋ ಅಪರಿಚಿತ ದುಷ್ಕರ್ಮಿಗಳಲ್ಲ; ಪರಿಚಿತರೇ ಈ ದುಷ್ಕೃತ್ಯ ಎಸಗುತ್ತಾರೆ. ಅದರಲ್ಲೂ ಗೆಳತಿಯರಿಗೆ ಗೆಳೆಯರು, ಹೆಂಡತಿಯರಿಗೆ ಗಂಡಂದಿರು ಆ್ಯಸಿಡ್ ಎರಚಿರುವುದೇ ಹೆಚ್ಚು.

ಅಪರೂಪಕ್ಕೆ ಆ್ಯಸಿಡ್ ಸಂತ್ರಸ್ತರ ಜಾಗದಲ್ಲಿ ಗಂಡು ಕಾಣಿಸಿಕೊಳ್ಳುವುದಿದೆ. ಮದುವೆಯಾಗಲು ನಿರಾಕರಿಸಿದ ಗೆಳೆಯನಿಗೆ ಯುವತಿಯೊಬ್ಬಳು ಆ್ಯಸಿಡ್ ಎರಚಿದ ಘಟನೆ ಉತ್ತರಪ್ರದೇಶದಲ್ಲಿ ನಡೆದಿದೆ. ಪ್ರೇಮಿಸಿದ ಯುವಕ ತನ್ನಿಂದ ದೂರವಾಗತೊಡಗಿದಾಗ ಸಿಟ್ಟಿಗೆದ್ದ ಹುಡುಗಿ, ಬೀದಿಯಲ್ಲೇ ಆ್ಯಸಿಡ್ ದಾಳಿ ಎಸಗಿದ್ದಾಳೆ.

## ಭಾರತದಲ್ಲೇ ಹೆಚ್ಚು

ಭಾರತದಲ್ಲಿನ ಅತ್ಯಾಚಾರ ಪ್ರಕರಣಗಳು ಅಂತರರಾಷ್ಟ್ರೀಯ ಗಮನಸೆಳೆದಿವೆ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿರುವ ಸಾಮೂಹಿಕ ಅತ್ಯಾಚಾರ–ಕೊಲೆ ಪ್ರಕರಣಗಳು ಮಾನವೀಯತೆಗೆ ಬಳಿಯುತ್ತಿರುವ ಮಸಿಯಂತೆ ಕಾಣಿಸುತ್ತಿವೆ. ಈ ಅತ್ಯಾಚಾರ ಪ್ರಕರಣಗಳ ಮತ್ತೊಂದು ರೂಪದಲ್ಲಿ ಆ್ಯಸಿಡ್ ದಾಳಿಗಳು ನಡೆಯುತ್ತಿವೆ. ಲಖನೌದಲ್ಲಿ ನಡೆದ ಘಟನೆಯೊಂದನ್ನು ನೋಡಿ. ಮೂವತ್ತೈದು ವರ್ಷದ ಮಹಿಳೆಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಯಿತು. ಅದರ ಬೆನ್ನಿಗೆ ಆ್ಯಸಿಡ್ ದಾಳಿಯೂ ನಡೆಯಿತು. ಒಂದು ಬಾರಿಯಲ್ಲ, ಮತ್ತೆ ಮತ್ತೆ ಆಕೆ ಆ್ಯಸಿಡ್ ದಾಳಿಗೆ ಒಳಗಾಗಬೇಕಾಯಿತು. ‘ಈ ಹೆಣ್ಣುಮಗಳ ಮೇಲೆ ದೌರ್ಜನ್ಯ ಎಸಗಿದವರ ಕ್ರೌರ್ಯವನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ಮತ್ತೆ ಮತ್ತೆ ಆಕೆ ದೌರ್ಜನ್ಯಕ್ಕೊಳಗಾಗುತ್ತಿರುವುದು ನಮಗೆ ಆತಂಕ ಉಂಟುಮಾಡಿದೆ’ ಎಂದು ನಿಟ್ಟುಸಿರುಬಿಡುತ್ತಾರೆ, ‘ಸ್ಟಾಪ್ ಆ್ಯಸಿಡ್ ಅಟ್ಯಾಕ್’ ಎನ್ನುವ ಆಂದೋಲನವನ್ನು ಹುಟ್ಟುಹಾಕಿರುವ ಆಶೀಶ್ ಶುಕ್ಲಾ. ನಿರಂತರ ದಾಳಿಯಿಂದ ತತ್ತರಿಸಿರುವ ಆ ನತದೃಷ್ಟೆ, ತನ್ನ ಮೇಲೆ ದೌರ್ಜನ್ಯ ಎಸಗುತ್ತಿರುವವರ ವಿರುದ್ಧ ದೂರು ನೀಡಲು ಕೂಡ ಭಯಪಡುತ್ತಿದ್ದಾಳಂತೆ.

ಭಾರತದಲ್ಲಿ ಪ್ರತಿ ವರ್ಷ 300 ಜನರು ಆ್ಯಸಿಡ್ ದಾಳಿಗೆ ಒಳಗಾಗುತ್ತಿದ್ದಾರೆ ಎನ್ನುತ್ತದೆ ಅಂಕಿಅಂಶ. ಈ ಪ್ರಮಾಣ ವಿಶ್ವದಲ್ಲೇ ಅತ್ಯಂತ ಹೆಚ್ಚು. ಇವೆಲ್ಲವೂ ದಾಖಲಾದ ಪ್ರಕರಣಗಳಷ್ಟೇ. ಕತ್ತಲಲ್ಲಿಯೇ ಉಳಿದ ಪ್ರಕರಣಗಳನ್ನೂ ಲೆಕ್ಕಕ್ಕೆ ಹಿಡಿದರೆ ಸಂತ್ರಸ್ತರ ಸಂಖ್ಯೆ 1000 ದಾಟುತ್ತದೆ ಎನ್ನುವ ಅಂದಾಜಿದೆ. ದೌರ್ಜನ್ಯಕ್ಕೆ ಒಳಗಾದ ಅನೇಕರು ದೂರು ನೀಡುವುದಕ್ಕೆ ಹೋಗುವುದಿಲ್ಲ. ಬಹುತೇಕ ಪ್ರಸಂಗಗಳಲ್ಲಿ ಅಪರಾಧ ಎಸಗಿದವರು ಪ್ರಭಾವಿಗಳಾಗಿರುವುದರಿಂದ, ಇನ್ನಷ್ಟು ಅಪಾಯವನ್ನು ಆಹ್ವಾನಿಸುವುದು ಬೇಡವೆಂದು, ಜೀವನದುದ್ದಕ್ಕೂ ನೋವಿನ ನಂಜುಣ್ಣುತ್ತ ಮೌನವಾಗಿ ಇರುವವರು ಸಾಕಷ್ಟು ಮಂದಿಯಿದ್ದಾರೆ. ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ಗಾಯಗೊಂಡು, ಸಾಮಾಜಿಕವಾಗಿ ಗಾಸಿಗೊಂಡು ಭೂಗತರಂತೆ ಬದುಕುವವರೂ ಇದ್ದಾರೆ. ಓರ್ವ ಹೆಣ್ಣುಮಗಳಂತೂ ತನ್ನ ಮೇಲೆ ಮೂರು ಬಾರಿ ಆ್ಯಸಿಡ್ ಎರಚಿದ ಗಂಡನೊಂದಿಗೆ ಈಗಲೂ ಬಾಳುತ್ತಲೇ ಇದ್ದಾಳೆ.

ಬಿಹಾರದ ಹಾಜಿಪುರದಲ್ಲಿ ಒಂದೇ ಕುಟುಂಬದ 16 ಸದಸ್ಯರ ಮೇಲೆ ಆ್ಯಸಿಡ್ ದಾಳಿ ನಡೆಸಲಾಗಿತ್ತು. ಮಕ್ಕಳಿಗೆ ಸಂಬಂಧಿಸಿದ ಕ್ಷುಲ್ಲಕ ವಿಚಾರ, ಕುಟುಂಬಗಳ ನಡುವಣ ಸಂಘರ್ಷವಾಗಿ ಈ ದಾಳಿ ನಡೆದಿತ್ತು.

## ನಿರಂತರ ಸಂಘರ್ಷಗಳೊಂದಿಗೆ ಬದುಕು

ಆ್ಯಸಿಡ್ ದಾಳಿಗೊಳಗಾದ ಸಂತ್ರಸ್ತರ ಪಾಲಿಗೆ ಯಾತನೆ ಎನ್ನುವುದು ಯಾವುದೋ ಕ್ಷಣವೊಂದಕ್ಕೆ ಸೀಮಿತವಾದುದಲ್ಲ. ಅದು ಅನುದಿನ, ಅನುಕ್ಷಣ ಜೊತೆಯಾಗಿ ಇರುವಂತಹದ್ದು. ಸೋನಿ ದೇವಿ ಎನ್ನುವ ಮತ್ತೊಬ್ಬ ನತದೃಷ್ಟ ಹೆಣ್ಣುಮಗಳ ಕಥೆ ಕೇಳಿ. ಆಕೆಯದು ಪೊಲೀಸ್ ಅಧಿಕಾರಿಯಾಗುವ ಕನಸು. ಆದರೆ, ಮನೆಯವರಿಗೆ ಮಗಳಿಗೆ ಮದುವೆ ಮಾಡಿ ಜವಾಬ್ದಾರಿಯಿಂದ ಕಳಚಿಕೊಳ್ಳುವುದೇ ಮುಖ್ಯವಾಗಿತ್ತು. ಗಂಡನ ಮನೆ ಸೇರಿದ ವಧು ಹೊಸ ಕನಸುಗಳಿಗೆ ಮೈಮನಗಳನ್ನು ತೆರೆದುಕೊಂಡಿದ್ದಾಯಿತು. ಆದರೆ, ಅಲ್ಲಿ ಕಾದಿದ್ದುದು ಸುಂದರ ಸ್ವಪ್ನಗಳಲ್ಲ, ಬರಿಯ ದುಃಸ್ವಪ್ನಗಳಷ್ಟೇ. ಮದುವೆಯ ಸಮಯದಲ್ಲಿ ಪಡೆದ ವರದಕ್ಷಿಣೆ ಗಂಡ ಮತ್ತವನ ಕುಟುಂಬದ ದಾಹ ತಣಿಸಲಿಲ್ಲ. ಮತ್ತಷ್ಟು ವರದಕ್ಷಿಣೆಗಾಗಿ ಒತ್ತಾಯಿಸತೊಡಗಿದರು. ಪಾತ್ರೆ ತೊಳೆಯುವ ಬದಲು ಸೋಪನ್ನೇ ಹೆಚ್ಚು ತೊಳೆಯುತ್ತಾಳೆಂದು ಅತ್ತೆ ದಂಡಿಸಿದರು. ಸ್ನಾನ ಮಾಡಲು ನೀರಿನಂತೆ

**ಕತ್ತರಿಸುವವನ ಕೈಯಲ್ಲಿ ಒಂದೇ ಕತ್ತಿ; ಚಿಗುರಿಕೊಳ್ಳುವವರಿಗೆ ನೂರಾರು ದಾರಿ**

ಯಾವುದೋ ವ್ಯಕ್ತಿಯ ಮನಸ್ಸಿನ ವಿಕೃತಿಗೆ ಬಲಿಯಾಗಿ ಮುಖವನ್ನು ಸುಟ್ಟುಕೊಂಡವರು ಇವರು. ಈ ನೋವು ನಮ್ಮದಷ್ಟೇ ಅಲ್ಲ, ಈ ಜಗದ ಹಲವರ ಪಾಡು ಇದು ಎಂಬುದು ಅರಿವಾದಾಗ, ತನ್ನ ಹಾಗೆಯೇ ನೋವುಂಡ ಇನ್ನೊಬ್ಬ ವ್ಯಕ್ತಿ ಎದುರುಗೊಂಡಾಗ ಸಿಗುವ ಆತ್ಮವಿಶ್ವಾಸವೇ ಬೇರೆ . ಹಲವು ಚೀತ್ಕಾರಗಳು ಸೇರಿ ಒಂದು ಜೀವಸ್ವರ ಹುಟ್ಟಿಕೊಳ್ಳುವ ಗಳಿಗೆ ಅದು. ಅಂಥ ಸನ್ನಿವೇಶಗಳನ್ನು ಹೆಚ್ಚು ಹೆಚ್ಚು ಆಯೋಜಿಸುವ ಪ್ರಯತ್ನಗಳು ಪ್ರಪಂಚದ ಎಲ್ಲೆಡೆ ನಡೆಯುತ್ತಿವೆ. ಆ್ಯಸಿಡ್ ದಾಳಿಗೆ ತುತ್ತಾದವರಿಗಾಗಿಯೇ ಫ್ಯಾಷನ್ ಷೋ ಏರ್ಪಡಿಸುವುದೂ ಅದರ ಒಂದು ಭಾಗ.ಮಹಿಳಾ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಫ್ಯಾಷನ್ ಷೋದಲ್ಲಿ ಭಾಗವಹಿಸಿದ್ದ ಆ್ಯಸಿಡ್ ದಾಳಿಗೆ ಒಳಗಾದ ಹೆಣ್ಣುಮಕ್ಕಳ ಮುಖದಲ್ಲಿನ ನಗು, ಮನುಷ್ಯಕ್ರೌರ್ಯದ ಅಟ್ಟಹಾಸಕ್ಕೆ ನೀಡಿದ ತಣ್ಣನೆಯ ಉತ್ತರದಂತೆ ಭಾಸವಾಗುತ್ತದೆ.

